## ಜೆಟ್‌ಪ್ಯಾಕ್

ಪ್ರವಾಸಿ ಆ್ಯಪ್ ಆಗಿದ್ದು, ಫೋಟೋಗಳನ್ನು ಒಳಗೊಂಡಿದೆ. ಪ್ರವಾಸಿ ಸ್ಥಳಗಳ ಪಟ್ಟಿಯಿದ್ದು, ಯಾವುದಾದರೊಂದು ಜಾಗಕ್ಕೆ ಹೋದರೆ ಅಲ್ಲಿರುವ ನೋಡುವಂತಹ ಇತರ ಸ್ಥಳಗಳ ಮಾಹಿತಿಯನ್ನು ಕೂಡಾ ತಿಳಿಸುತ್ತದೆ. ಅಲ್ಲಿರುವ ಮನರಂಜನಾ ಸ್ಥಳಗಳು, ಉಪಾಹಾರಗೃಹಗಳು, ಕ್ರೀಡಾ ಚಟುವಟಿಕೆಗಳ ಬಗ್ಗೆಯೂ ವಿವರ ನೀಡುತ್ತದೆ. ಹತ್ತಿರವಿರುವ ಸ್ಥಳಗಳ ವಿವರವೂ ಸಿಗುತ್ತದೆ. ಚಿತ್ರಗಳಲ್ಲದೇ ಭೂಪಟ ಕೂಡಾ ಲಭ್ಯ. ಈ ಕಂಪೆನಿಯನ್ನು ಗೂಗ್ಲ್ ಇತ್ತೀಚೆಗೆ ಖರೀದಿಸಿದೆ.

ಇದು ಇನ್‌ಸ್ಟಾಗ್ರಾಂ ಅನ್ನೂ ಒಳಗೊಂಡಿದೆ. ಇದು ಐಫೋನ್‌ನ ಉಚಿತ ಆ್ಯಪ್. ಒಟ್ಟಿಗೆ ಮೂರು ಆ್ಯಪ್‌ಗಳಿವೆ.






PIMSLEUR®

## ಪಿಮ್‌ಸ್ಲ್ಯೂರ್ ಕೋರ್ಸ್ ಮ್ಯಾನೇಜರ್

ಕಾರ್‌ನಲ್ಲಿ ಹೋಗುತ್ತಿರುವಾಗ ಅಥವಾ ನಿಮ್ಮ ನಾಯಿಯ ಜೊತೆ ವಿಹಾರ ಮಾಡುತ್ತಿದ್ದಾಗ ಭಾಷೆಯನ್ನು ಕಲಿಯ ಬಯಸುವಿರಾದರೆ ಈ ಆ್ಯಪ್ ನೆರವಿಗೆ ಬರುತ್ತದೆ. ಇದು ಐಫೋನ್ ಆ್ಯಪ್ ಆಗಿದ್ದು, ಆಡಿಯೋ ಕಾರ್ಯಕ್ರಮವಿದು. ಬರೆಯುವುದು ಅಥವಾ ಓದುವುದರ ಅನುಭವ ಸಾಧ್ಯವಿಲ್ಲ. ಪಿಮ್‌ಸ್ಲ್ಯೂರ್ ಎಂಪಿ3 ಆನ್ ಮಾಡಿ. ಮನೆಗೆಲಸ ಮಾಡುತ್ತಿದ್ದರೂ ಅದನ್ನು ಕೇಳುತ್ತ, ಜೋರಾಗಿ ನಿಮ್ಮಷ್ಟಕ್ಕೇ ಮಾತನಾಡುತ್ತ ಹೊಸ ಭಾಷೆ ಕಲಿಯಬಹುದು.

## ಸಿಗ್ನಲ್

ಈ ಆ್ಯಪ್‌ನಿಂದ ಆರಾಮವಾಗಿ ಉಚಿತ ವೈಸ್‌ಓವರ್ ಐಪಿ ಕರೆಗಳನ್ನು ನಿಮ್ಮ ಐಫೋನ್‌ನಿಂದ ಮಾಡಬಹುದು. ಕರೆಗಳನ್ನು ಮಾಡಿದಾಗ ಹಲವಾರು ಅಡೆತಡೆಗಳು ಸಾಮಾನ್ಯ. ಮೊದಲು ಸಿಗ್ನಲ್ ಆ್ಯಪ್ ತೆರೆಯಿರಿ. ನಿಮ್ಮ ನಂಬರ್ ಇತರ ಸಿಗ್ನಲ್ ಬಳಕೆದಾರರನ್ನು ತಾನೇ ಹುಡುಕುತ್ತದೆ. ಹೀಗಾಗಿ ನಿಮ್ಮ ಫೋನ್ ನಂಬರ್ ಅನ್ನೂ ನೋಂದಣಿ ಮಾಡಿಸಬೇಕಾಗುತ್ತದೆ.







## ಸ್ಕೆಚ್‌ಫ್ಯಾಕ್ಟರ್

ಇದು ಕ್ರೌಡ್‌ಸೋರ್ಸಿಂಗ್ ಹಾಗೂ ಮ್ಯಾಪಿಂಗ್ ಆ್ಯಪ್ ಆಗಿದ್ದು ನಿಮ್ಮ ಸುತ್ತಮುತ್ತ ನಡೆಯುವ ವಿಚಿತ್ರವಾದ, ಕೆಲವೊಮ್ಮೆ ಅಪಾಯಕಾರಿಯಾದ ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಬಹುದು. ಆದರೆ ಯಾವುದೇ ಜಾತಿ, ಜನಾಂಗ ನಿಂದನೆ ಮಾಡುವಂತಹ ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲು ಇದು ಪ್ರಚೋದಿಸುವುದಿಲ್ಲ. ಈ ಆ್ಯಪ್ ಐಫೋನ್‌ಗೆ ಉಚಿತವಾಗಿದ್ದು, ತಕ್ಷಣ ಪೋಸ್ಟ್ ಮಾಡಬಹುದು.

■ ಎಸ್. ತುಂಬೆ